ಸಾಕ್ಷಿಯನ್ನು ದಿನಾಂಕ: 29-05-2024 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಕೆ.ಆರ್.ಎನ್. ವಕೀಲರಿಂದಃ**

ಮದುವೆಯಾದ ಮೇಲೆ ಕಾರವಾರದಲ್ಲಿ ಒಂದು ವಾರ ಗಂಡನ ಜೊತೆ ವಾಸವಿದ್ದೆ. ನಂತರ ನಾನು ಗಂಡನ ಜೊತೆ ಬೆಂಗಳೂರಿಗೆ ಹೋಗಿದ್ದು ಅಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆವು. ಅಲ್ಲಿ ಸುಮಾರು ಒಂದು ವರ್ಷ ನಾನು ವಾಸ ಮಾಡಿದ್ದೆ. ಅಲ್ಲಿ ನನ್ನ ಗಂಡನ ತಾಯಿ, ಮೂರು ಜನ ತಂಗಿಯಂದಿರು ವಾಸ ಮಾಡುತ್ತಿದ್ದರು. ಉಜ್ವಲಾ ಎನ್ನುವವರು ನನ್ನ ಗಂಡನ ಅವಿವಾಹಿತ ತಂಗಿಯಾಗಿದ್ದು ಅವರು ಕೆಲಸ ಮಾಡುತ್ತಿದ್ದರು. ನನ್ನ ಗಂಡ ಎಫ್.ಎ.ಐ. ಸಂಸ್ಥೆಯಲ್ಲಿ ಟೀಮ್ ಲೀಡರ್ ಆಗಿ ಕೆಲಸ ಮಾಡುತ್ತಿದ್ದರು. ನನ್ನ ಮದುವೆಯ ಸಮಯದಲ್ಲಿ ನನ್ನ ತಾಯಿ ನನಗೆ ಎರಡು ಬಳೆ ಮತ್ತು ಒಂದು ನಕ್ಲೆಸ್ನನ್ನು ನೀಡಿದ್ದರು. ನನ್ನ ಗಂಡನಿಗೆ ಒಂದು ರಿಂಗನ್ನು ನೀಡಿದ್ದರು. ಮದುವೆಯಾದ 6 ತಿಂಗಳ ನಂತರ ನಾನು ಗರ್ಭವತಿಯಾಗಿದ್ದೆ. ನಾನು ಗಂಡನ ಮನೆಯಲ್ಲಿದ್ದಾಗ ನನ್ನ ಸಂಬಂಧಿಕರು ಯಾರು ಅವರ ಮನೆಗೆ ಬಂದಿರುವುದಿಲ್ಲ. ಎದುರುದಾರರ ತಾಯಿ ವಯಸ್ಸಾದವರು ಎಂದರೆ ಸರಿ. 2 ನೇ ಅರ್ಜಿದಾರರು ಹೊನ್ನಾವರದ ಬಳಕೂರು ಆಸ್ಪತ್ರೆಯಲ್ಲಿ ಜನನ ಹೊಂದಿದ್ದಾರೆ. ಅವರ ಜನನ ದಿನಾಂಕಃ 06.04.2019 ರಂದು ಆಗಿರುತ್ತದೆ. ನಾನು ಗರ್ಭವತಿಯಾದ 5 ನೇ ತಿಂಗಳಿನಲ್ಲಿ ನನ್ನ ತಾಯಿಯ ಮನೆಗೆ ಬಂದಿರುತ್ತೇನೆ. ನಂತರ ನಾನು ಪುನಃ ನನ್ನ ಗಂಡನ ಮನೆಗೆ ಹೋಗಿದ್ದು ಇರುವುದಿಲ್ಲ. ಮದುವೆಯಾದ ನಂತರ ಕೂಡ ಕಾರವಾರದಲ್ಲಿ ಇರುವ ನನ್ನ ಗಂಡನ ಮನೆಗೆ ಹೋಗಿದ್ದೆ. ಆದರೆ ನಿರ್ದಿಷ್ಟವಾಗಿ ಯಾವಾಗ ಎಂದು ಹೇಳಲು ಆಗುವುದಿಲ್ಲ. ಎದುರುದಾರರ ತಂಗಿಯನ್ನು ಕಾರವಾರದಲ್ಲಿಯೇ ಮದುವೆ ಮಾಡಿಕೊಟ್ಟಿರುತ್ತಾರೆ.

ಅರ್ಜಿಯನ್ನು ತಯಾರಿಸುವಾಗ ನಾನು ಮತ್ತು ನನ್ನ ತಂದೆ ಮಾಹಿತಿ ಕೊಟ್ಟಿರುತ್ತೇವೆ. ಎದುರುದಾರರಿಗೆ ನಾನು ನೋಟಿಸ ಕೊಟ್ಟಿದ್ದು ಅದಕ್ಕೆ ಎದುರುದಾರರು ಪ್ರತ್ಯುತ್ತರ ನೀಡಿರುತ್ತಾರೆ. ಅದನ್ನು ಓದಿ ನೋಡಿರುತ್ತೇನೆ. ಪ್ರತ್ಯುತ್ತರದಲ್ಲಿ ಎದುರುದಾರರು ನನಗೆ ಅವರ ಜೊತೆ ಸಂಸಾರ ಮಾಡುವಂತೆ ತಿಳಿಸಿದ್ದರು ಎಂದರೆ ಸರಿ. ಮದುವೆಗಿಂತ ಪೂರ್ವದಲ್ಲಿ ಎದುರುದಾರರಿಗೆ ಶೀನಾ ಎನ್ನುವವರ ಜೊತೆ ಸಂಬಂಧ ಇತ್ತು. ಈ ವಿಚಾರವನ್ನು ನಮ್ಮ ಸಂಬಂಧಿಕರಾದ ಭಾರತಿ ಫರ್ನಾಂಡಿಸ್ ರವರಿಂದ ತಿಳಿದುಕೊಂಡಿದ್ದೆ. ಅವರು ಕಾರವಾರದ ಕೆತೆಡ್ರನ್ ಚರ್ಚ್ ಹತ್ತಿರ ವಾಸ ಮಾಡುತ್ತಾರೆ. ನಾನು ಬೆಂಗಳೂರಿನಲ್ಲಿದ್ದಾಗ ಸಂಬಂಧಿಕರಿಗೆ ದೂರವಾಣಿ ಕರೆ ಮಾಡುತ್ತಿದ್ದೆ. ಮದುವೆಯಾದ 2 ನೇ ತಿಂಗಳಿನಿಂದ ಎದುರುದಾರರು ನನಗೆ ಹಿಂಸೆ ಕೊಡಲು ಪ್ರಾರಂಭಿಸಿದ್ದರು. ಆ ರೀತಿ ಹಿಂಸೆ ಮಾಡಿದ ಮಾರನೇ ದಿನವೇ ಸದ್ರಿ ಮಾಹಿತಿಯನ್ನು ನನ್ನ ತಂದೆ ತಾಯಿಯವರಿಗೆ ತಿಳಿಸಿರುತ್ತೇನೆ. ಸಾಕ್ಷಿ ಮುಂದುವರಿದು ಅವರು ಸದ್ರಿ ಕೃತ್ಯವನ್ನು ಪುನರಾವರ್ತನೆ ಮಾಡುತ್ತಿದ್ದರು. ಈ ಎಲ್ಲಾ ಮಾಹಿತಿಯನ್ನು ನನ್ನ ಅರ್ಜಿಯಲ್ಲಿ ಬರೆಸಲು ನನಗೆ ತೊಂದರೆ ಇರಲಿಲ್ಲ. ಈ ಎಲ್ಲಾ ವಿಚಾರವನ್ನು ನಾನು ನೀಡಿದ ನೋಟಿಸಲ್ಲಿ ಬರೆಸಲು ನನಗೆ ತೊಂದರೆ ಇರಲಿಲ್ಲ. ನಾನು ವಕೀಲರಿಗೆ ಮಾಹಿತಿ ನೀಡುವಾಗ ಈ ಎಲ್ಲಾ ವಿಚಾರವನ್ನು ಬರೆದುಕೊಟ್ಟಿದ್ದೆ.

ನನಗೆ ಹಲ್ಲೆ ಮಾಡಿದಾಗ ನಾನು ಪುಷ್ಪಾ ನರ್ಸಿಂಗ್ ಹೋಮ್ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಆ ಬಗ್ಗೆ ನನ್ನ ಹತ್ತಿರ ದಾಖಲೆ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಎದುರುದಾರರು ಈಗ ಯಾವ ಪರಿಸ್ಥಿತಿಯಲ್ಲಿ ಇದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ಎದುರುದಾರರಿಗೆ ಹೆಚ್ಚಿನ ಸಕ್ಕರೆ ಖಾಯಿಲೆ ಮತ್ತು ಅನೇಕ ದೈಹಿಕ ಖಾಯಿಲೆಗಳು ಇದೆ ಎಂದರೆ ಸರಿಯಲ್ಲ. ನಾನು ಅನೇಕ ಬಾರಿ ಎದುರುದಾರರದು ಸಂಪರ್ಕ ಮಾಡಲು ಪ್ರಯತ್ನಿಸಿದ್ದೇನೆ ಆದರೆ ಅವರು ನನ್ನ ದೂರವಾಣಿ ಕರೆಯನ್ನು ಸ್ವೀಕರಿಸಿರುವುದಿಲ್ಲ. ಅರ್ಜಿ ದಾಖಲಾದ ಮೇಲೆ ನಾನು ಎದುರುದಾರರ ಜೊತೆ ಮಾತನಾಡಿರುವುದಿಲ್ಲ. 2 ನೇ ಅರ್ಜಿದಾರರ ನಾಮಕರಣಕ್ಕೆ ನಾನು ಅವರನ್ನು ಕರೆದಿದ್ದು, ಎದುರುದಾರರು ಬಂದಿರುವುದಿಲ್ಲ. ಎದುರುದಾರರು 2021 ರಿಂದ ಎಷ್ಟು ಬಾರಿ ಕಾವಾರದ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ ಎಂದು ವಿಚಾರಣೆ ಮಾಡಿರುವುದಿಲ್ಲ. ನನ್ನ ಸಹೋದರ ದುಬೈನಲ್ಲಿ ಕೆಲಸ ಮಾಡುತ್ತಾರೆ. ನಾನು ಈಗ ಮಜರೆಲೊ ಇಂಗ್ಲೀಷ್ ಮೀಡಿಯಂ ಶಾಲೆಯಲ್ಲಿ ಕಂಪ್ಯೂಟರ್ ಕೆಲಸವನ್ನು ಮಾಡುತ್ತಿದ್ದೇನೆ. ಸಾಕ್ಷಿ ಮುಂದುವರಿದು ನನ್ನನ್ನು ಕಂಪ್ಯೂಟರ್ ಕೆಲಸಕ್ಕೆ ಆಗಾಗ ಕರೆಯುತ್ತಿದ್ದು ಆಗ ಮಾತ್ರ ನಾನು ಹೋಗುತ್ತೇನೆ. ಸಾಕ್ಷಿ ಮುಂದುವರಿದು ನನಗೆ ಕೆಲಸದ ಆಧಾರದ ಮೇಲೆ ಪ್ರತಿ ಕೆಲಸಕ್ಕೆ 200-300 ರೂಪಾಯಿ ಕೊಡುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ಶಾಲೆಯಿಂದ ನಾನು ಯಾವುದೇ ಹಣವನ್ನು ಪಡೆದಿದ್ದು ಇರುವುದಿಲ್ಲ.

ಎದುರುದಾರರ ತಾಯಿಗೆ ಬಿಪಿ, ಶುಗರ್ ಖಾಯಿಲೆ ಇದೆ ಎಂದರೆ ಸರಿ.ಎದುರುದಾರರ ತಮ್ಮ ಕುವೈತ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ತಂದೆ ಮೃತಪಟ್ಟಿರುತ್ತಾರೆ. ನಾನು ಮದುವೆ ಪೂರ್ವದಲ್ಲಿ ಇಸ್ರೇಲ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಏಜೆಂಟ್ ರ ಮೂಲಕ ನಾನು ಇಸ್ರೇಲ್‌ಗೆ ಹೋಗಿದ್ದೆ. ನನ್ನೊಟ್ಟಿಗೆ ಇಸ್ರೆಲ್‌ನಲ್ಲಿ ಸುರೇಶ ಡಯಾಸ್ ಇವರು ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸುರೇಶ ಡಯಾಸ್ ರವರು ವಾಟ್ಸಪ್‌ನಲ್ಲಿ ಖಾಯಂ ಆಗಿ ನನಗೆ ಕರೆ ಮಾಡುತ್ತಾರೆ ಎಂದರೆ ಸರಿಯಲ್ಲ. ಅವರು ನಾನು ಇಸ್ರೇಲನಲ್ಲಿ ಇರುವಾಗಲು ತುಂಬಾ ಒಡನಾಟದಲ್ಲಿ ಇದ್ದರು ಎಂದರೆ ಸಾಕ್ಷಿ ಅವರು ನನ್ನ ಸಹೋದರರಾಗುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯವರ ತಾಯಿ ಮತ್ತು ಸುರೇಶರವರ ತಂದೆ ಅಕ್ಕ ಮತ್ತು ತಮ್ಮನಾಗುತ್ತಾರೆ. ಅವರ ಮನೆ ಕೊಡಾಣೆಯಲ್ಲಿದೆ. ಅವರ ಪರಿಚಯ ಚಿಕ್ಕವರಿದ್ದಾಗಿನಿಂದಲೂ ಇದೆ. ಮೊದಲಿನಿಂದಲೂ ಅವರು ನಮ್ಮ ಮನೆಗೆ ಮತ್ತು ನಾವು ಅವರ ಮನೆಗೆ ಹೊಗಿ ಬರುವುದು ಇತ್ತು. ಅವರು ಈಗಲೂ ಸಹ ಇಸ್ರೇಲ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ.

ನಾಮಕರಣಕ್ಕೆ ತಂದೆ ಮತ್ತು ತಾಯಿಯವ ಮನೆಯವರು ಬರಬೇಕು ಎಂದರೆ ಸರಿ. ಸಾಕ್ಷಿ ಮುಂದುವರಿದು ನಾವು ಕರೆ ಮಾಡಿದರೂ ಕುಡ ಎದುರುದಾರರು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನಾವು ಬೆಂಗಳೂರಿನಲ್ಲಿ ಸುಮಾರು ಒಂದು ವರ್ಷಗಳ ಕಾಲ ವಾಸವಿದ್ದೆವು. ನಾನು ಗರ್ಭಣಿಯಾಗಿದ್ದಾಗ ಪುಷ್ಪಾ ನರ್ಸಿಂಗ್ ಹೋಮನಲ್ಲಿಯೇ ಚಿಕಿತ್ಸೆ ಪಡೆದಿರುತ್ತೇನೆ. ಸಾಕ್ಷಿ ಮುಂದುವರಿದು ಎದುರುದಾರರು ನನ್ನನ್ನು ಎರಡು ತಿಂಗಳು ಮಾತ್ರ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಬೆಂಗಳೂರಿನಲ್ಲಿ ವಾಸವಿದ್ದಾಗ ನನ್ನ ಮತ್ತು ಎದುರುದಾರರ ನಡುವೆ ಗಲಾಟೆ ನನ್ನ ಅತ್ತೆ ಮತ್ತು ನನ್ನ ಮೈದುನನ ಎಂದುರುಗಡೆಯೇ ಆಗಿರುತ್ತದೆ. ನಾಮಕರಣದ ಬಗ್ಗೆ ನಾವು ಪತ್ರವನ್ನು ಕಳುಹಿಸಿರುವುದಿಲ್ಲ. ಫೋನ್ ಮುಖಾಂತರ ತಿಳಿಸಿರುತ್ತೇವೆ. ಎದುರುದಾರರಿಗೆ ಕರೋನಾ ರೋಗ ಬಂದಿದ್ದು ಅವರ ಧ್ವನಿ ಪೆಟ್ಟಿಗೆಗೆ ಘಾಸಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಲಂಗ್ ಇನಫೆಕ್ಷನ್ ಆಗಿ ತುಂಬಾ ದಿನ ಆಸ್ಪತ್ರೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಈಗಲೂ ಕೂಡ ಅದೇ ಕಂಪನಿಯಲ್ಲಿ ಎದುರುದಾರರ ಕೆಲಸ ಮಾಡುತ್ತಿದ್ದು ಆ ಬಗ್ಗೆ ನನಗೆ ದಾಖಲೆ ಇರುವುದಿಲ್ಲ. ಸಾಕ್ಷಿ ಮುಂದುವರಿದು ಸದ್ರಿ ಕಂಪನಿಗೆ ದೂರವಾಣಿ ಕರೆ ಮಾಡಿದಾಗ ಅವರು ಅಲ್ಲೇ ಕೆಲಸ ಮಾಡುತ್ತಿರುವುದಾಗಿ ಕಂಪನಿಯವರು ಹೇಳಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ದಾಖಲೆ ಕೊಡುವಂತೆ ಪತ್ರ ಕಳುಹಿಸಿದ್ದು ಕಂಪನಿಯವರು ದಾಖಲೆ ನೀಡಿರುವುದಿಲ್ಲ.

ನ್ಯಾಯಾಲಯದ ಅವಧಿ ಮುಗಿದ ಕಾರಣ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ ಇದೆ/-

ಪ್ರ ದ ನ್ಯಾದಂ ಹೊನ್ನಾವರ.